# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 396 |
| ವಿಧಾನ ಪರಿಷತ್ ಸದಸ್ಯರು | ಶ್ರೀ ಎಂ.ಎಲ್. ಅನಿಲ್ ಕುಮಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19.08.2026 |
| ಉತ್ತರಿಸುವ ಸಚಿವರು | ಉಪ ಮುಖ್ಯಮಂತ್ರಿಗಳು, ಕಂದಾಯ ಹಾಗೂ ಕ್ರೀಡಾ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರೀಸರ್ವೆ ಸಮಯದಲ್ಲಿ ಎಲ್ಲಾ ಗ್ರಾಮಗಳ ಗ್ರಾಮ ಠಾಣಾಗಳನ್ನು ನಿಗದಿಪಡಿಸಲಾಗಿರುತ್ತದೆಯೇ;<br>ನಂತರದಲ್ಲಿ ಬೆಳೆದಿರುವ ಗ್ರಾಮ ಠಾಣಾಗಳನ್ನು ನಿಗದಿಪಡಿಸುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; ಬಂದಿದ್ದಲ್ಲಿ, ಸರ್ಕಾರದಿಂದ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಹೌದು.<br><br>ಪ್ರಸ್ತುತ ಚಾಲ್ತಿಯಲ್ಲಿರುವ ರೀಸರ್ವೆ ಸಂದರ್ಭದಲ್ಲಿ ಎಲ್ಲಾ ಕೃಷಿ ಜಮೀನನ್ನು ಅಳತೆ ಮಾಡಿ ಉಳಿದ ಜನವಸತಿ ಪ್ರದೇಶಗಳನ್ನು ಗ್ರಾಮ ನಕಾಶೆಗಳಲ್ಲಿ ಗ್ರಾಮ ಠಾಣಾಗಳೆಂದು ಗುರುತಿಸಲಾಗಿರುತ್ತದೆ.<br><br>ರೀಸರ್ವೆಯ ನಂತರದಲ್ಲಿ ಬೆಳೆದಿರುವ ಗ್ರಾಮಠಾಣಾಗಳನ್ನು, ಸರ್ಕಾರವು ದಾಖಲೆ ರಹಿತ ಜನವಸತಿಗಳನ್ನು ಕಂದಾಯ ಗ್ರಾಮ/ಗ್ರಾಮದ ಭಾಗವಾಗಿ ಪರಿವರ್ತಿಸಿ ಅಲ್ಲಿಯ ನಿವಾಸಿಗಳಿಗೆ ವಾಸದ ಹಕ್ಕು ದಾಖಲೆಗಳನ್ನು ನೀಡುವ ಕುರಿತು ಸುತ್ತೋಲೆ ಸಂಖ್ಯೆ:ಕಂಇ 20 ಸಿಸಿಆರ್ಎ 2019, ದಿನಾಂಕ:15-10-2019ರಲ್ಲಿ, ಕರ್ನಾಟಕ ಭೂ ಸುಧಾರಣಾ ಕಾಯ್ದೆ-1961ರ ಕಲಂ 38-ಎ ರನ್ವಯ 2-ಇ ಅಧಿಸೂಚನೆಯನ್ನು ಜಿಲ್ಲಾಧಿಕಾರಿಗಳು ಕೆಲವು ಷರತ್ತುಗಳನ್ನು ವಿಧಿಸಿ ಜನವಸತಿ ಪ್ರದೇಶವನ್ನು ಗ್ರಾಮಠಾಣವಾಗಿ ಪರಿಗಣಿಸಿ ಅದನ್ನು ಕಂದಾಯ ಗ್ರಾಮ/ಗ್ರಾಮದ ಭಾಗ/ಬಡಾವಣೆ ಆಗಿ ಅಧಿಸೂಚಿಸಲು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಅಧಿಸೂಚನೆಯಾದ ನಂತರದಲ್ಲಿ ಸದರಿ ಅಧಿಸೂಚನೆ ಆಧರಿಸಿ ಭೂಮಾಪನ ಇಲಾಖೆ ವತಿಯಿಂದ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.<br><br>ಮುಂದುವರೆದು, ದಿನಾಂಕ:24-04-2020ರಂದು ಕೇಂದ್ರ ಸರ್ಕಾರದಿಂದ ಗ್ರಾಮೀಣ ಜನವಸತಿ ಪ್ರದೇಶಗಳಿಗೆ ಡ್ರೋಣ್ ಆಧಾರಿತ ಸರ್ವೆ ಮೂಲಕ ಹಕ್ಕುದಾಖಲೆಗಳನ್ನು ಸಿದ್ಧಪಡಿಸಿ ವಿತರಿಸುವ ಸ್ವಾಮಿತ್ವ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಅದರಂತೆ ಜನವಸತಿ ಪ್ರದೇಶದ ಎಲ್ಲಾ ಆಸ್ತಿಗಳಿಗೆ ಹಕ್ಕು ದಾಖಲೆಗಳನ್ನು ಸಿದ್ಧಪಡಿಸಿ ವಿತರಿಸಲಾಗುತ್ತಿದೆ. |
| (ಆ) | ಗ್ರಾಮಠಾಣಕ್ಕೆ ಹೊಂದಿಕೊಂಡಂತೆ ಸರ್ವೆ ನಂಬರುಗಳಲ್ಲಿ ನಿರ್ಮಿಸಿರುವ ಮನೆಗಳನ್ನು ಗ್ರಾಮ ಠಾಣಕ್ಕೆ ಸೇರಿಸಲು ಇರುವ ತೊಂದರೆಗಳೇನು; ಯಾವ ಕಾಲಮಿತಿಯೊಳಗೆ ಸೇರಿಸಲಾಗುವುದು; ಇದನ್ನು ಕಾರ್ಯರೂಪಕ್ಕೆ ತರಲು ಸರ್ಕಾರ | ಈಗಾಗಲೇ ಅಳತೆಯಾಗಿ ಸರ್ವೆ ನಂಬರುಗಳನ್ನು ನೀಡಲಾದ ಪ್ರದೇಶವನ್ನು ಗ್ರಾಮಠಾಣ ಎಂದು ಪರಿವರ್ತಿಸಲು ಭೂಕಂದಾಯ ಅಧಿನಿಯಮದಲ್ಲಿ ಅವಕಾಶ ಇರುವುದಿಲ್ಲ.<br>ಸರ್ವೆ ನಂಬರುಗಳನ್ನು ನೀಡಲಾದ ಗ್ರಾಮಠಾಣಕ್ಕೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಮನೆಗಳಿದ್ದರೂ ಅವುಗಳ ಬಳಕೆ ಬದಲಾಗುವುದಿಲ್ಲ. ಗ್ರಾಮಠಾಣ ವಿಸ್ತರಣೆ ಮೂಲಕ ಭೂಪರಿವರ್ತನೆಯಾಗದ ಹೊರತು ಭೂಬಳಕೆ |

| | | |
|---|---|---|
| | ತೆಗೆದುಕೊಂಡ ಕ್ರಮಗಳೇನು; (ಸಂಪೂರ್ಣವಾದ ಮಾಹಿತಿ ನೀಡುವುದು) | ಬದಲಾವಣೆಗೆ ಕಾನೂನಿನನ್ವಯ ಯಾವುದೇ ವಿನಾಯಿತಿ ದೊರೆಯುವುದಿಲ್ಲ. |
| (ಇ) | ಎಷ್ಟು ವರ್ಷಗಳಿಗೊಮ್ಮೆ ಗ್ರಾಮ ಠಾಣಾಗಳನ್ನು ನಿಗದಿಪಡಿಸಿ ಗ್ರಾಮ ನಕಾಶೆಗಳಲ್ಲಿ ಇಂಡೀಕರಿಸಬೇಕಾಗಿರುತ್ತದೆ; ನಿಗದಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಾದ ಮಾಹಿತಿ ನೀಡುವುದು) | ಗ್ರಾಮಠಾಣಗಳನ್ನು ಎಷ್ಟು ವರ್ಷಗಳಿಗೊಮ್ಮೆ ನಿಗದಿಪಡಿಸಬೇಕು ಎಂಬ ನಿರ್ದಿಷ್ಟ ಕಾಲಾವಧಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ, ನಿಯಮಗಳು ಅಥವಾ ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಿರುವುದಿಲ್ಲ.<br><br>ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 115ರನ್ವಯ ಸರ್ವೆ ಗ್ಯಾರಂಟಿ ಅವಧಿ 30 ವರ್ಷವಾಗಿದ್ದು, ಪ್ರತಿ ಸರ್ವೆ ಸೆಟಲ್ಮೆಂಟ್ ಕಾರ್ಯ ಪೂರ್ಣಗೊಂಡ ನಂತರ ಅದರಂತೆ, ಗ್ರಾಮ ನಕಾಶೆಯನ್ನು ಕಾಲೋಚಿತ ಗೊಳಿಸಬೇಕಾಗಿರುತ್ತದೆ.<br><br>ಮರು ಭೂಮಾಪನವು ಕಾರ್ಯವು ಕೈಗೊಳ್ಳದೇ ಇದ್ದಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 126 ರನ್ವಯ ಈ ಹಿಂದಿನ ಸೆಟಲ್ಮೆಂಟ್ ಜಾರಿಯಲ್ಲಿರುತ್ತದೆ. |
| (ಈ) | ಗ್ರಾಮ ನಕಾಶೆಗಳನ್ನು ಎಷ್ಟು ವರ್ಷಗಳಿಗೊಮ್ಮೆ ಇಂಡೀಕರಿಸಬೇಕು; ಪ್ರಸ್ತುತ ಯಾವ ಇಸ್ವಿಯ ನಕಾಶೆ ಚಾಲ್ತಿಯಲ್ಲಿರುತ್ತದೆ; | ಗ್ರಾಮ ನಕಾಶೆಗಳನ್ನು ನಿರ್ದಿಷ್ಟ ಸಂಖ್ಯೆಯ ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಇಂಡೀಕರಿಸಬೇಕೆಂಬ ಬಗ್ಗೆ ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ.<br><br>ಗ್ರಾಮ ನಕಾಶೆಗಳನ್ನು ಪ್ರತಿ ರೀಸರ್ವೆ/ಸರ್ವೆ ಸೆಟಲ್ಮೆಂಟ್ ಕಾರ್ಯ ಪೂರ್ಣಗೊಂಡ ನಂತರ ಕಾಲೋಚಿತಗೊಳಿಸಲಾಗುತ್ತದೆ.<br><br>ಸರ್ವೆ, ರೀಸರ್ವೆ / ರಿ-ಕ್ಲಾಸಿಫಿಕೇಶನ್ ಕಾಲಕ್ಕೆ, ಗಡಿ ಬದಲಾವಣೆ ಹಾಗೂ ಇತರೆ ದಾಖಲೆಗಳ ಆಧಾರದ ಮೇಲೆ ನಕಾಶೆಗಳನ್ನು ಪರಿಷ್ಕರಿಸುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ ರೀಸರ್ವೆ / ರಿ-ಕ್ಲಾಸಿಫಿಕೇಶನ್ ಅವಧಿಯಲ್ಲಿ ಕಾಲೋಚಿತಗೊಳಿಸಲ್ಪಟ್ಟ ನಕಾಶೆಗಳು ಚಾಲ್ತಿಯಲ್ಲಿದ್ದು, ಅಧೀನ ಕಛೇರಿಗಳಿಂದ ಸೂಕ್ತ ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಿ ಕಾಲೋಚಿತ ಗ್ರಾಮ ನಕಾಶೆಗಳನ್ನು ಮರು ಮುದ್ರಿಸಿಕೊಡಲಾಗುತ್ತದೆ. |
| (ಉ) | ಗ್ರಾಮ ನಕಾಶೆಗಳನ್ನು ನಿಗದಿತ ಅವಧಿ ಯಲ್ಲಿ ಇಂಡೀಕರಿಸಲು ಇರುವ ಸಮಸ್ಯೆಗಳೇನು; ಗ್ರಾಮ ನಕಾಶೆಗಳನ್ನು ಕಾಲ ಕಾಲಕ್ಕೆ ಇಂಡೀಕರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣವಾದ ಮಾಹಿತಿ ನೀಡುವುದು) | ಸರ್ವೆ ಗ್ಯಾರಂಟಿ ಅವಧಿಯ 30 ವರ್ಷ ಮುಕ್ತಾಯವಾದ ತರುವಾಯ, ಭೂಮಿಯ ಮೇಲೆ ಆಗಿರುವ ಎಲ್ಲಾ ಭೌಗೋಳಿಕ ಬದಲಾವಣೆಗಳನ್ನೊಳಗೊಂಡಂತೆ ರಾಜ್ಯದ ಎಲ್ಲಾ ಗ್ರಾಮಗಳನ್ನು ಮರು ಭೂಮಾಪನಕ್ಕೊಳಪಡದೇ ಇರುವುದರಿಂದ ನಕಾಶೆಯಲ್ಲಿ ಕಾಲೋಚಿತಗೊಳಿಸಲು ಸಾಧ್ಯವಾಗುತ್ತಿರುವುದಿಲ್ಲ.<br><br>ಈ ಬಗ್ಗೆ, ಕೇಂದ್ರ ಸರ್ಕಾರದ ಸಹಭಾಗಿತ್ವದ ಪ್ರಮುಖ ಯೋಜನೆಯಾದ ಸ್ವಾಮಿತ್ವ ಯೋಜನೆ ಮೂಲಕ ರಾಜ್ಯದ ಪ್ರತಿ ಗ್ರಾಮ ಠಾಣಾ ಆಸ್ತಿಗಳನ್ನು ಆಧುನಿಕ ಉಪಕರಣ ಬಳಸಿ, ಕಂದಾಯ ಇಲಾಖೆ/ಪಂಚಾಯತ್ ರಾಜ್ ಇಲಾಖೆ ಸಹಕಾರದೊಂದಿಗೆ ಕಾಲೋಚಿತಗೊಳಿಸುವ ಕಾರ್ಯ ಚಾಲ್ತಿಯಲ್ಲಿದ್ದು, ಹಂತ ಹಂತವಾಗಿ ಎಲ್ಲಾ ಗ್ರಾಮ ಠಾಣಾ ಆಸ್ತಿಗಳ ಸರ್ವೆ/ಕಾಲೋಚಿತ ಗೊಳಿಸುವ ಕಾರ್ಯ ಕೈಗೊಳ್ಳಲಾಗುತ್ತದೆ. ಅದರಂತೆ ಸ್ವಾಮಿತ್ವ ಯೋಜನೆಯಡಿ, |

| | | |
|---|---|---|
| | | ರಾಜ್ಯದಲ್ಲಿ ಗ್ರಾಮಠಾಣಾ ಆಸ್ತಿಗಳ ಅಳತೆ ಮತ್ತು ನಕ್ಷೆ ತಯಾರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ಗ್ರಾಮ ನಕಾಶೆಗಳ ಮುದ್ರಣ ಪ್ರತಿಗಳನ್ನು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ಕೋರಿಕೆ ಮೇರೆಗೆ ಸಾರ್ವಜನಿಕರಿಗೆ ವಿತರಿಸಲಾಗುತ್ತಿದ್ದು, 05 ಪ್ರತಿಗಳಿಗಿಂತ ಕಮ್ಮಿ ಆದಂತಹ ಗ್ರಾಮದ ಗ್ರಾಮ ನಕಾಶೆಯಲ್ಲಿನ ಎಲ್ಲಾ ಬದಲಾವಣೆಗಳನ್ನು ಇಂದೀಕರಿಸಿ ಕಚ್ಚಾ, ನಕಾಶೆ ತಯಾರಿಸಿ ಮರು ಮುದ್ರಣಕ್ಕಾಗಿ ಸಲ್ಲಿಸುವ ವ್ಯವಸ್ಥೆ ಜಾರಿಯಲ್ಲಿದೆ. |

**ಸಂಖ್ಯೆ: ಕಂಇ 198 ಎಸ್‌ಎಸ್‌ಸಿ 2026**

**(ಡಾ.ಜಿ ಪರಮೇಶ್ವರ)**
ಉಪ ಮುಖ್ಯಮಂತ್ರಿ
ಕಂದಾಯ ಹಾಗೂ ಕ್ರೀಡಾ ಸಚಿವರು